ಅತ್ಯಂತ ಶಾಂತಚಿತ್ತರಾಗಿ ಕುಳಿತಿದ್ದರು. ಅವರ ಮುಖದ ಮೇಲೆ ತಲ್ಲಣಗೊಂಡ ಯಾವುದೇ ಸಂಕೇತಗಳಿರಲಿಲ್ಲ. ರೇವತಿಯ ಮದುವೆ ಗಣಪುಲೆಯೊಂದಿಗೆ ಮಾಡಿ, ಕನ್ಯಾದಾನ ಮಾಡಿದ ಕೃತಕೃತ್ಯ ಭಾವನೆ ಅವರಲ್ಲಿತ್ತು. ಆತಂಕದ ಛಾಯೆ ಇನಿತೂ ಇರಲಿಲ್ಲ. ನಿಶಿಕಾಂತ ಔಪಚಾರಿಕವಾಗಿ ಅವರೊಂದಿಗೆ ಮಾತನಾಡಿ, ಒಳಗಿನ ಕೋಣೆಯೊಳಗೆ ಹೋದ. ಎದುರಿಗೆ ಕುಳಿತಿದ್ದ ರೇವತಿಯನ್ನು ನೋಡಿ ಮನ ಸಂತೃಪ್ತವಾಯಿತು. ಆಕೆ ಉದ್ದೇಶಪೂರ್ವಕವಾಗಿ ನೀಲಿಸೀರೆ ಉಟ್ಟುಗೊಂಡಿದ್ದಳು. ಮುಗುಳ್ನಗೆಯಿಂದ ಕೂಡಿದ ಆಕೆಯ ಮುಖ ಮಲ್ಲಿಗೆ ಹೂವಿನಂತೆ ಅರಳಿತ್ತು. ಆಕೆಯ ಶುಭ್ರವಾದ ಹಲ್ಲುಗಳು ಪ್ರಕಾಶಮಾನವಾಗಿ ಹೊಳೆಯುತ್ತಿದ್ದವು. ನಿಶಿಕಾಂತನಿಗೆ ಧಾವಿಸಿ ಆಕೆಯ ತುಟಿಯ ಮೇಲೆ ತುಟಿಯ ಮುದ್ರೆ ಒತ್ತಬೇಕು ಎನಿಸಿತು. ಆದರೆ ಇಂದು ಆತನಿಗೆ ರೇವತಿ ಭಿನ್ನವಾಗಿ ಕಾಣಿಸುತ್ತಿದ್ದಳು. ಎಳೆಯರಿದ್ದಾಗಿನಿಂದ ಒಟ್ಟಾಗಿ ಕೂಡಿ ಬೆಳೆದವರು, ಬಾಲ್ಯದಾಟಗಳನ್ನು ಆಡಿದವರು. ಮಗ್ಗಲು ಮಗ್ಗಲು, ಮೈಗಂಟಿಸಿ ಕುಳಿತು ಪುಸ್ತಕಗಳನ್ನು ಓದಿ ಅದರಲ್ಲಿಯೇ ಕವಿತೆಗಳನ್ನು ಗುಣಗುಣಿಸಿದವರು. ಈಗ, ಮದುವೆ ಆದ ಮೇಲೆ ಆಕೆಯ ವ್ಯಕ್ತಿತ್ವದಲ್ಲಿ ಏನೋ ಬದಲಾವಣೆ ಎದ್ದು ಕಾಣುತ್ತಿತ್ತು.

ನಿಶಿಕಾಂತ ಮಂದಹಾಸ ಬೀರುತ್ತ ಆಕೆಯ ಕಡೆಗೆ ನೋಡುತ್ತಿದ್ದ. ಆದರೆ ಆಕೆ ಗಂಭೀರಳಾಗಿದ್ದನ್ನು ಕಂಡು, ಆತಂಕಗೊಂಡ ನಿಶಿಕಾಂತ, ''ನಿನ್ನೆ ರಾತ್ರಿ ಅವ್ವ, ರೇವತಿ ಬಂದಿದ್ದಾಳೆ, ನಿನಗೆ ಗೊತ್ತೆ? ಎಂದು ಕೇಳಿದ ಮೇಲೆ ನೀನು ಬಂದದ್ದು ಗೊತ್ತಾಯಿತು" ಎಂದ.

"ನಾನು ಈಗ ರೇವತಿ ಅಲ್ಲ'' ಆಕೆಯ ನಗುವ ಪ್ರಯತ್ನ ಯಶಸ್ವಿಯಾಗಲಿಲ್ಲ. ಆಕೆ ಮಾತು ಮುಂದುವರೆಸಿದಳು... ''ಈಗ ನನಗೆ ರಾಧಾ ಎಂಬ ಹೊಸ ಹೆಸರು ಇಡಲಾಗಿದೆ. ರಾಧಾ ನಿನಗೆ ಗೊತ್ತಲ್ಲಾ, ಅದೇ, ಆಕೆ ಕೃಷ್ಣನ ಜತೆ ಪ್ರೇಮ ಮಾಡಿದವಳು. ಆದರೆ ಲಗ್ನವಾದದ್ದು ಬೇರೆಯವನ ಕೂಡ."

ತನ್ನನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಳೆ ಎಂದು ಆತ ಕಂಡುಕೊಂಡ. ಆತನಿಗೆ ಸಮಾಧಾನವೂ ಆಯಿತು. ನಗುವ ಪ್ರಯತ್ನ ಮಾಡುತ್ತ ನುಡಿದ: "ಅಂದರೆ ನಮ್ಮ ಹಾಗೆ ರಾಧಾ ಕೃಷ್ಣರು ಕೂಡ ಸಾಕಷ್ಟು ನೋವುಗಳನ್ನು ಅನುಭವಿಸಿದರು ಎಂದು ಕಾಣುತ್ತದೆ."

ಮುಂದೆ ಹದಿನೈದು ನಿಮಿಷ ಸಂಭಾಷಣೆಯಲ್ಲಿ ಮಗ್ನರಾದರು. ಆದರೆ ಮಾತುಕತೆ ಅಲ್ಲಲ್ಲಿ ನಿಲ್ಲುತ್ತ ಕುಂಟುತ್ತ ಸಾಗಿತ್ತು. ಪರಸ್ಪರರಿಗೆ ಹೇಳಬೇಕಾದುದು, ಕೇಳಬೇಕಾದುದು ಬಹಳಷ್ಟು ಇತ್ತು. ಆದರೆ ಅವರಿಬ್ಬರ ಮುಖದಿಂದ ಶಬ್ದಗಳು ಹೊರಡುತ್ತಿರಲಿಲ್ಲ. ರೇವತಿಯ ಮದುವೆ ಆಗಿ ತಿಂಗಳಾಗಿತ್ತು. ಗಂಡನೊಂದಿಗೆ ಶರೀರ ಸುಖದ ಅನನ್ಯ ಆನಂದವನ್ನು ಆಕೆ ಹಂಚಿಕೊಳ್ಳುತ್ತಿರಬೇಕು ಎಂದು ನಿಶಿಕಾಂತನಿಗೆ ಖಾತ್ರಿ ಇತ್ತು. ಆದರೆ ಅದೇ ವೇಳೆಗೆ ಈ ಆಲೋಚನೆ ಮಾತ್ರದಿಂದ ಆತ ವಿಹ್ವಲಗೊಂಡಿದ್ದ. ಚಡಪಡಿಸುತ್ತಿದ್ದ. ರೇವತಿಯ ಶರೀರದ ಮೇಲಿನ ಸ್ವಾಮ್ಯ ಆತನಿಂದ ಗಣಪುಲೆಗೆ ವರ್ಗಾವಣೆಗೊಂಡಿತ್ತು. ಈ ವಿಷಯಕ್ಕಾಗಿ ರೇವತಿಯ ಪ್ರತಿಕ್ರಿಯೆ ತಿಳಿಯಲು ಉತ್ಸುಕನಾಗಿದ್ದ. "ಮನೆ ವಾತಾವರಣ ಚೆನ್ನಾಗಿದೆಯೇ? ನಿನ್ನ ಗಂಡನ ಸ್ವಭಾವ ಹೇಗಿದೆ?" "ಇಷ್ಟು ಬೇಗನೆ ಆತನ ಸ್ವಭಾವ ಹೇಗೆ ಗೊತ್ತಾಗಬೇಕು? ಚೆನ್ನಾಗಿ ಇರಬಹುದು. ಇರಲಿ, ಮದುವೆ ಆಗಿ ಬಿಟ್ಟಿದೆ. ಈಗ ಅದನ್ನು ತೆಗೆದುಕೊಂಡು ನಾನೇನು ಮಾಡಲಿ?" "ಹೀಗೆಂದರೆ ಹೇಗೆ? ನೀನು ಇಡೀ ಜೀವನ ಆತನ ಜೊತೆಗೆ ಕಳೆಯಬೇಕಾಗಿದೆ." "ಹೌದು, ಕಳೆಯಬೇಕಾಗಿದೆಯೇನೊ, ನಿಜ. ಶಬ್ದವನ್ನೂ ಕೂಡ ನೀನು ಸರಿಯಾಗಿ ಉಪಯೋಗಿಸಿದ್ದಿ. ಆದರೆ ನನಗೆ ಆ ಮನೆಯಲ್ಲಿ, ಹಾಗೂ ಗಣಪುಲೆಯಲ್ಲಿ ಆಸಕ್ತಿಯಾಗಲೀ,